ಡಿ.ವಿ. ಸದಾನಂದಗೌಡ ಮುಖ್ಯಮಂತ್ರಿಯವರು

ಅ) ಒಟ್ಟು – 72 – ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತವೆ.

ಮಂಗಳೂರು	ಮೂಡಬಿದ್ರೆ	ಬಂಟ್ವಾಳ	ಪುತ್ತೂರು	ಕಡಬ	ಬೆಳ್ತಂಗಡಿ	ಸುಳ್ಯ	ಒಟ್ಟು
10	6	6	7	8	22	11	72

ಆ) ವಿಲೇವಾರಿ ಆದ ಅರ್ಜಿಗಳು – 25

ಉಳಿಕೆ ಅರ್ಜಿಗಳು – 47,

ಈ ಅರ್ಜಿಗಳು ಪರಿಶೀಲನೆ ಹಂತದಲ್ಲಿರುತ್ತದೆ.

ಇ) ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು.

ಗುತ್ತಿಗೆ ನೌಕರರ ಸೇವೆಯನ್ನು ಖಾಯಂಗೊಳಿಸುವುದು

91 : (183)

ಶ್ರೀ ಸುರೇಶ್‌ಗೌಡ (ನಾಗಮಂಗಲ)

ಅ) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಮುಖ್ಯಮಂತ್ರಿಯವರ ಸಚಿವಾಲಯ ಹಾಗೂ ಸಚಿವರ ಆಪ್ತ ಶಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿ ಮತ್ತು ಡಿ ಗುಂಪಿನ ನೌಕರರನ್ನು ಖಾಯಂಗೊಳಿಸಲು ವಿಶೇಷ ನಿಯಮಾವಳಿ ರೂಪಿಸಲಾಗಿದೆಯೇ ;

ಆ) ಹಾಗಿದ್ದಲ್ಲಿ ಈ ನಿಯಮಾವಳಿ ಷರತ್ತುಗಳು ಯಾವುವು ಈ ಷರತ್ತುಗಳನ್ನು ಎಷ್ಟು ಜನ ನೌಕರರು ಪೂರೈಸಿದ್ದಾರೆ; ಈ ಷರತ್ತುಗಳನ್ನು ಪೂರೈಸಿರುವ ನೌಕರರನ್ನು ಅಧಿಸೂಚನೆಯಲ್ಲಿ ಪರಿಗಣಿಸದೇ ಇರುವುದಕ್ಕೆ ಕಾರಣಗಳೇನು; ಕರಡು ಅಧಿಸೂಚನೆಗೆ ಎಷ್ಟು ಮಂದಿ ನೌಕರರು ಆಕ್ಷೇಪಣೆ ಸಲ್ಲಿಸಿದ್ದಾರೆ (ವಿವರ ಒದಗಿಸುವುದು)

ಇ) ಆ ಆಕ್ಷೇಪಣೆ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು;

ಈ) ಆ ನೌಕರರ ಪೈಕಿ ಎಷ್ಟು ಮಂದಿ ನೌಕರರು ಕೆ.ಎ.ಟಿ. ಮೊರೆ ಹೋಗಿದ್ದಾರೆ; ಅದೇ ನಿಯಮಾವಳಿಯ ಷರತ್ತನ್ನು ಪೂರೈಸಿದ ನೌಕರರ ಸೇವೆಯನ್ನು ಖಾಯಂಗೊಳಿಸಲು ಸರ್ಕಾರ ತಾರತಮ್ಯ ಎಸಗಿರುವುದಕ್ಕೆ ಕಾರಣಗಳೇನು (ವಿವರ ನೀಡುವುದು)

ಉ) ಕೆ.ಎ.ಟಿ. ನೀಡಿರುವ ಆದೇಶ ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಸರ್ಕಾರಿ ಅಧಿಸೂಚನೆ ಸಂಖ್ಯೆ ಸಿಅಸುಇ 118 ಎಸ್‌ಆರ್‌ಡಿ 2005ರ

ಅಧಿಸೂಚನೆಗೆ ತಿದ್ದುಪಡಿ ತಂದು ಷರತ್ತು ಪೂರೈಸಿರುವ ನೌಕರರ ಸೇವೆಯನ್ನು ಯಾವಾಗ ಖಾಯಂಗೊಳಿಸಲಾಗುವುದು?

ಡಿ.ವಿ. ಸದಾನಂದಗೌಡ ಮುಖ್ಯಮಂತ್ರಿಯವರು

ಅ) ಹೌದು, ವಿಶೇಷ ನಿಯಮಾವಳಿ 2005 – The Karnataka Civil Services (Absorption of Contract Group – C & D Employees in the Karnataka Government Secretariat Services) (Special) Rules 2005 ರೂಪಿಸಲಾಗಿದೆ.

ಆ) ಗುತ್ತಿಗೆ ಆಧಾರದ ಮೇಲೆ 10 ವರ್ಷ ಸೇವೆ ಸಲ್ಲಿಸಿದವರು ಅಥವಾ ದಿನಾಂಕ:01.06.2004 ಕ್ಕಿಂತ ಮೊದಲ 10 ವರ್ಷಗಳ ಅವಧಿಯಲ್ಲಿ ಕನಿಷ್ಠ 2400 ದಿನಗಳ ಸೇವೆ ಸಲ್ಲಿಸಿದವರು ಮತ್ತು ದಿನಾಂಕ 27.02.2002 ರಂದು ಸೇವೆಯಲ್ಲಿದ್ದವರನ್ನು ಮಾತ್ರ ಸಕ್ರಮಗೊಳಿಸಲು ಅವಕಾಶ ಕಲ್ಪಿಸಲಾಗಿದೆ. ವಿಶೇಷ ನಿಯಮಾವಳಿಯ ಅನುಬಂಧದಲ್ಲಿರುವ 28 ಜನರ ಸೇವೆಯನ್ನು ಖಾಯಂಗೊಳಿಸಲು ವಿಶೇಷ ನಿಯಮಾವಳಿಯನ್ನು ರಚಿಸಲಾಗಿದ್ದು ನಿಯಮಾವಳಿಯ ಷರತ್ತುಗಳನ್ನು ಪೂರೈಸಿದ 24 ಜನರ ಸೇವೆಯನ್ನು ಖಾಯಂಗೊಳಿಸಲಾಗಿದೆ. ಸ್ವೀಕೃತವಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದೆ.

ಇ) ಸ್ವೀಕೃತವಾದ ಎಲ್ಲಾ ಆಕ್ಷೇಪಣೆಗಳನ್ನು ಪರಿಶೀಲಿಸಲಾಗಿದೆ.

ಈ) ಈ ಪೈಕಿ 19 ಮಂದಿ ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಪ್ರಕರಣವು ಇನ್ನೂ ಬಾಕಿ ಇದೆ.

ಉ) ಕೆ.ಎ.ಟಿ.ಯ ಆದೇಶದ ದೃಢೀಕರಿಸಿದ ಪ್ರತಿ ಸ್ವೀಕೃತವಾಗಿರುವುದಿಲ್ಲ. ಈ ಬಗ್ಗೆ ಸರ್ಕಾರಿ ವಕೀಲರೊಂದಿಗೆ ವ್ಯವಹರಿಸಲಾಗುತ್ತಿದೆ.

ಸಂಖ್ಯೆ : ಸಿಆಸುಇ 127 ಆಹಿಸೇ 2012

54 : (187)

ಶ್ರೀ ಡಾ॥ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ (ಸೇಡಂ)

ಅ) 2011–12ನೇ ಸಾಲಿನ ಆಯವ್ಯಯದಲ್ಲಿ ಯೋಜನಾ ವೆಚ್ಚದಲ್ಲಿ ಎಷ್ಟು ಹಣ ಒದಗಿಸಲಾಗಿದೆ. (ಇಲಾಖಾವಾರು ವಿವರ ಒದಗಿಸುವುದು)